SHADOWFAX
Think ahead!

**August 03, 2026**

**To**

| | |
|---|---|
| **National Stock Exchange of India Ltd** | **BSE Limited** |
| **Exchange Plaza, C/1, Block G,** | **P J Towers,** |
| **Bandra Kurla Complex,** | **Dalal Street,** |
| **Bandra (East) Mumbai – 400 051** | **Mumbai – 400 001** |
| **NSE Symbol: SHADOWFAX** | **BSE Scrip Code: 544685** |

Dear Sir/ Madam,

**Sub: Newspaper Publication regarding Unaudited Financial Results for the quarter ended June 30, 2026**

Pursuant to Regulation 47 of the SEBI (Listing Obligations and Disclosure Requirements) Regulations, 2015, we are enclosing herewith copies of the newspaper publications of the unaudited financial results for the quarter ended June 30, 2026, published in **Financial Express (English)** on Saturday, August 01, 2026 and **Vishwavani (Kannada)** on Sunday, August 02, 2026.

The said newspaper publications are also being made available on the website of the Company at https://www.shadowfax.in/investor-relations/

Kindly take the above information on record.

**For Shadowfax Technologies Limited**

KRISHNAKANTH VENKATA GANGAVARAPU
Digitally signed by KRISHNAKANTH VENKATA GANGAVARAPU
Date: 2026.08.03 13:06:11 +05'30'

Name: Krishnakanth Venkata Gangavarapu
Designation: Company Secretary & Compliance Officer
ICSI Membership No. A17291

# ಪೊಲೀಸ್ ಪರೀಕ್ಷೆ: ಪ್ರತಿ ಕೊಠಡಿಯಲ್ಲಿ ಜಾಮರ್

## ರಾಜ್ಯದ 884 ಕೇಂದ್ರಗಳಲ್ಲಿ ಇಂದು ಪರೀಕ್ಷೆ | 14 ತಾಸಿನಲ್ಲಿ ಒಎಂಆರ್ ಶೀಟ್ ಪ್ರಕಟ: ಪ್ರಿಯಾಂಕ್ ಖರ್ಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪೊಲೀಸ್ ಕಾನ್ಸ್‌ಟೇಬಲ್ ನೇಮಕಾತಿ ಪರೀಕ್ಷೆಯಲ್ಲಿ ಧಾರ್ಮಿಕ ಉಡುಪು ಧರಿಸಿ ಪರೀಕ್ಷೆ ಬರೆಯಲು ಅಪೇಕ್ಷಿಸುವವರು, ಪರೀಕ್ಷೆ ಆರಂಭವಾಗುವ 2:30 ಗಂಟೆಗೂ ಮೊದಲು ಕೇಂದ್ರದಲ್ಲಿ ಹಾಜರಿದ್ದು ತಪಾಸಣೆಗೆ ಒಳಪಟ್ಟು, ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಈ ಕುರಿತು ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಯಾವುದೇ ಧಾರ್ಮಿಕ ವಸ್ತ್ರಕ್ಕೆ ನಿರ್ಬಂಧನೆ ಇಲ್ಲ, ವಿದ್ಯಾರ್ಥಿಗಳ ಭವಿಷ್ಯ ಬಲಪಡಿಸುವ ನಿಟ್ಟಿನಲ್ಲಿ, ಈ ಬಾರಿಯ ಪರೀಕ್ಷಾ ಆಯೋಜನೆಗಾಗಿ ರಾಜ್ಯ ಸರಕಾರ ಸಮರೋಪಾದಿಯಲ್ಲಿ ಸಿದ್ಧತೆ ನಡೆಸಿದೆ. ಪರೀಕ್ಷಾ ಕೇಂದ್ರಕ್ಕೆ ತರಬಹುದಾದ ಹಾಗೂ ನಿಷೇಧಿತ ವಸ್ತುಗಳ ಸಂಪೂರ್ಣ ಪಟ್ಟಿಯನ್ನು ಈಗಾಗಲೇ ಅಭ್ಯರ್ಥಿಗಳ ಹಾಲ್ ಟಿಕೆಟ್‌ನಲ್ಲಿ ವಿವರವಾಗಿ ನೀಡಲಾಗಿದ್ದು, ಎಲ್ಲರೂ ಕಡ್ಡಾಯವಾಗಿ ವಸ್ತ್ರ ಸಂಹಿತೆ ಪಾಲಿಸಲು ಕೋರಿದೆ. ಪರೀಕ್ಷೆ ಆರಂಭದ 2:30ರ ಬಳಿಕ ಬಂದರೆ ಧಾರ್ಮಿಕ ಉಡುಪು ಧರಿಸಿ ಪರೀಕ್ಷೆ ಬರೆಯಲು ಅವಕಾಶ ಇರುವುದಿಲ್ಲ. ಯಾವುದೇ ಗೊಂದಲಕ್ಕೆ ಒಳಗಾಗದೇ, ಆತ್ಮವಿಶ್ವಾಸದಿಂದ ಉದ್ಯೋಗಾಕಾಂಕ್ಷಿಗಳು ಯಶಸ್ವಿಯಾಗಿ ಪರೀಕ್ಷೆ ಎದುರಿಸಬೇಕು ಎಂದರು.



ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಅಳವಡಿಸಿರುವ ಸಿಸಿಟಿವಿಗಳನ್ನು ಕೆಇಎ ಮಾನಿಟರಿಂಗ್ ರೂಮ್‌ನಿಂದ ಕೆಇಎ ಅಧಿಕಾರಿಗಳು ಪರಿಶೀಲನೆ ನಡೆಸಿದರು.

**14 ತಾಸಿನಲ್ಲಿ ಒಎಂಆರ್ ಶೀಟ್ ಪ್ರಕಟ**

ಪರೀಕ್ಷೆ ನಡೆದ 24 ಗಂಟೆಯಲ್ಲಿ ಸಿಇಟಿ ವೆಬ್ ಸೈಟ್‌ನಲ್ಲಿ ಒಎಂಆರ್ ಶೀಟ್ ಪ್ರಕಟಿಸಲಾಗುವುದು. ಪ್ರಶ್ನೆ ಮತ್ತು ಉತ್ತರಗಳನ್ನು ಬದಲಿ ಮಾಡಲು ತೀರ್ಮಾನಿಸಲಾಗಿದೆ. ಈ ಬಾರಿ ಮಲ್ಟಿಲೇಯರ್ ಒಎಂಆರ್ ಶೀಟ್ ಮಾಡಲಾಗಿದೆ. ಪರೀಕ್ಷೆ ಹಿನ್ನೆಲೆಯಲ್ಲಿ ತಯಾರಿ, ಜವಾಬ್ದಾರಿ ಫಿಕ್ಸ್ ಮಾಡಲಾಗಿದೆ. ಟ್ಯಾಂಪರ್ ಪ್ರೂಫ್ ಆಗಿರಲಿದ್ದು, ಒನ್ ಟೈಮ್ ಸೆಕ್ಯೂರಿಟಿ ಹಾಕಲಾಗುತ್ತಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಏನೆಲ್ಲ ನಿಷೇಧ: ಸೆಕ್ಯೂರ್ ಪ್ರಿಂಟಿಂಗ್ ಪ್ರೊಸೆಸ್ ಮಾಡಲಾಗಿದೆ. ಪ್ರಶ್ನೆ ಪತ್ರಿಕೆ ಹೊರ ರಾಜ್ಯದಲ್ಲಿ ಪ್ರಿಂಟ್ ಮಾಡಲಾಗುತ್ತಿದೆ. ಪರೀಕ್ಷೆಯ ಪ್ರತೀ ರೂಮ್‌ನಲ್ಲಿ ಜಾಮರ್ ಹಾಕಲು ತೀರ್ಮಾನಿಸಲಾಗಿದೆ. ಮೊಬೈಲ್ ಫೋನ್, ಬ್ಲೂಟೂತ್ ಬಳಕೆ ಕೂಡ ನಿಷೇಧ ಮಾಡಲಾಗಿದೆ. ಡಿಸಿ ಹಾಗೂ ಎಸ್‌ಪಿಗಳಿಗೆ ಪ್ರತ್ಯೇಕ ಸೂಚನೆ ನೀಡಲಾಗಿದೆ. ಡಿಡಿಪಿಐ ಅನುಮತಿ ಮೇರೆಗೆ ಪರೀಕ್ಷಾ ಕೇಂದ್ರಗಳನ್ನು ಬದಲಿಸಲು ಸೂಚನೆ ನೀಡಲಾಗಿದೆ. ಪರೀಕ್ಷಾ ಕೇಂದ್ರಗಳ ಮೇಲೆ ನಿಗಾ ಇಡಲು ಫ್ಲೈಯಿಂಗ್ ಸ್ಕ್ವಾಡ್ ಮಾಡಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತ ನಿಷೇಧ ಹೇರಲಾಗುತ್ತಿದ್ದು, ವಾಹನ ಓಡಾಟ ನಿಷೇಧಿಸಲಾಗಿದೆ ಎಂದರು.

ಐವರು ಪರೀಕ್ಷಾರ್ಥಿಗಳ ಮುಂದೆ ಪ್ರಶ್ನೆ ಪತ್ರಿಕೆ ಸೀಲ್ ಓಪನ್ ಮಾಡಲಾಗುವುದು. ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಹಾಕಲಾಗುವುದು. ಅಧಿಕಾರಿಗಳ ಮೊಬೈಲ್‌ಗೂ ನಿಷೇಧ ಹೇರಲಾಗಿದೆ. ಸಾಮಾಜಿಕ ಜಾಲತಾಣಗಳ ಮಾನಿಟರ್ ಮಾಡಲಾಗುವುದು. ತಾಲೂಕುಮಟ್ಟ, ಜಿಲ್ಲಾಮಟ್ಟದಲ್ಲಿ ವಿಜಿಲೆನ್ಸ್ ಹಾಕಲಾಗಿದೆ. ಹಿಂದಿನ ಆರೋಪಿ, ಅನುಮಾನಾಸ್ಪದ ವ್ಯಕ್ತಿ, ಕೋಚಿಂಗ್ ಸೆಂಟರ್ ಮೇಲೆ ನಿಗಾ ವಹಿಸಲಾಗಿದ್ದು, ನಿರ್ಲಕ್ಷ್ಯ ಕಂಡುಬಂದರೆ ಕ್ರಮ ಖಚಿತ.

-ಪ್ರಿಯಾಂಕ್ ಖರ್ಗೆ, ಗೃಹ ಸಚಿವ

## ಸಮಾಚಾರ ಸಣ್ಣದಲ್ಲ

### 3500 ರೌಡಿಗಳ ವಿರುದ್ಧ ಕ್ರಮ



**ಬೆಂಗಳೂರು:** ರಾಜಧಾನಿಯಲ್ಲಿ ಪುಡಿರೌಡಿ, ಪುಂಡ-ಪೋಕರಿಗಳು ಹಾಗೂ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗುವವರ ವಿರುದ್ಧ ನಗರ ಪೊಲೀಸರು ಆರಂಭಿಸಿರುವ 'ಪಿಕ್ ಅಪ್ ಸ್ಕ್ವಾಡ್' ಕಾರ್ಯಾಚರಣೆ ಯಶಸ್ಸು ಕಂಡಿದೆ. ಕಳೆದ 110ದಿನಗಳಲ್ಲಿ ನಗರದಾದ್ಯಂತ ಕಾರ್ಯಾಚರಣೆ ನಡೆಸಿರುವ ಪೊಲೀಸರು 3,500ಕ್ಕೂ ಹೆಚ್ಚು ಜನರನ್ನು ಕರ್ನಾಟಕ ಪೊಲೀಸ್ ಕಾಯಿದೆಯಡಿ ಕ್ರಮ ಕೈಗೊಂಡಿದ್ದಾರೆ.

ಮದ್ಯ, ಗಾಂಜಾ, ಮಾರಕಾಸ್ತ್ರ ಜಪ್ತಿ ಕಾರ್ಯಾಚರಣೆ ವೇಳೆ 144 ರೌಡಿಗಳು ಡ್ರಗ್ಸ್ (ಗಾಂಜಾ/ಮಾದಕ ವಸ್ತು) ಸೇವಿಸುತ್ತಿದ್ದಾಗ ಸಿಕ್ಕಿಬಿದ್ದಿದ್ದು, 28 ಮಂದಿ ಮಾದಕ ವಸ್ತು ಮಾರಾಟದಲ್ಲಿ ತೊಡಗಿರುವುದು ಪತ್ತೆಯಾಗಿದೆ. ಜತೆಗೆ, ಮಚ್ಚು ಸೇರಿದಂತೆ ಮಾರಕಾಸ್ತ್ರಗಳನ್ನು ಇಟ್ಟುಕೊಂಡಿದ್ದ 7 ಮಂದಿಯ ವಿರುದ್ಧ ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

**ಸೃಜನ ವಿವಿಧೋದ್ದೇಶ ಸೌಹಾರ್ದ ಸಹಕಾರ ಸಂಘ ನಿಯಮಿತ.,**

64, 3ನೇ ಕ್ರಾಸ್, ಎಂ.ವಿ. ಸೀತಾರಾಮಯ್ಯ ರಸ್ತೆ, ಗವಿಪುರಂ ಬಡಾವಣೆ, ಬೆಂಗಳೂರು–560019. ದೂ.: 080–26616969, 9483816969.
ವೆಬ್‌ಸೈಟ್: www.srujana Sahakari.com

ಸಹಕಾರಿಯ 2025–26ನೇ ಸಾಲಿನ 13ನೇ ಸರ್ವಸದಸ್ಯರ ಸಭೆಯನ್ನು **ದಿನಾಂಕ: 09.08.2026 ರ ಭಾನುವಾರ ಬೆಳಿಗ್ಗೆ 10–00 ಗಂಟೆಗೆ** ಶ್ರೀ ಸರಸ್ವತಿ ಕಲ್ಯಾಣ ಮಂಟಪ, ಮೊದಲನೇ ಮಹಡಿ, (ಶ್ರೀ ದೇವಗಿರಿ ರಾಘವೇಂದ್ರ ಸ್ವಾಮಿಗಳ ಮಠದ ಮೇಲೆ) 24ನೇ ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070 ರಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

ಸಭೆಯ ಸೂಚನಾ ಪತ್ರವನ್ನು Bulk ಅಂಚೆಯ ಮುಖಾಂತರ ಹಾಗೂ SMS ಸಂದೇಶವನ್ನು ನಮ್ಮ ಸಹಕಾರಿಯ ಸದಸ್ಯರಿಗೆ ಅವರ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗಿದೆ. ಯಾವ ಸದಸ್ಯರಿಗೆ ತಲುಪಿರುವುದಿಲ್ಲವೋ ಅಂತಹ ಸದಸ್ಯರು ಈ ಪತ್ರಿಕಾ ಪ್ರಕಟಣೆಯನ್ನು ಸೂಚನಾ ಪತ್ರವೆಂದು ಪರಿಗಣಿಸಿ ದಯಮಾಡಿ ಸಭೆಗೆ ಹಾಜರಾಗಬೇಕೆಂದು ವಿನಂತಿಸಲಾಗಿದೆ.

ಸದಸ್ಯರಿಗೆ ಮಾತ್ರ ಪ್ರವೇಶ.

ಸ್ಥಳ ಬೆಂಗಳೂರು
ದಿನಾಂಕ 01.08.2026

ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿ

**THE SOUTH INDIA PAPER MILLS LIMITED**
CIN : L85110KA1959PLC001352
Regd. Office: Chikkayana Chatra, Nanjangud - 571 302 Karnataka State
₹. In Lakhs except per share data

**STATEMENT OF UNAUDITED FINANCIAL RESULTS FOR THE QUARTER ENDED 30TH JUNE 2026**

| Sl No | Particulars | Quarter Ended 30-06-2026 | Previous Year ending 31-03-2026 | Quarter Ended 30-06-2025 |
|---|---|---|---|---|
| 1. | Total income from operations | 11,758.39 | 43,381.21 | 10,688.84 |
| 2. | Net profit for the period (before Tax, Exceptional and / or Extraordinary Items) | 665.34 | 1,434.87 | 131.21 |
| 3. | Net profit for the period before Tax, (after Exceptional and / or Extraordinary Items) | 665.34 | 1,434.87 | 131.21 |
| 4. | Net Profit for the period after tax,(after exceptional and / or extraordinary items) | 497.79 | 1,074.11 | 98.16 |
| 5. | Total comprehensive Income for the period [comprising profit for the period (after tax) and other comprehensive income (after tax)] | 497.79 | 1,110.08 | 98.16 |
| 6. | Equity Share Capital | 1,875.00 | 1,875.00 | 1,875.00 |
| 7. | Reserves (excluding Revaluation Reserve as shown in the Balance Sheet of previous the year) i.e., Other Equity | 20,177.44 (as on 31-03-2026) | 20,177.44 (as on 31-03-2026) | 19,103.33 (as on 31-03-2025) |
| 8. | Earnings Per Share (of ₹ .10/- each) in ₹ . Basic : | 2.65 | 5.73 | 0.52 |
| | Diluted : | 2.65 | 5.73 | 0.52 |

Note: The above is an extract of the detailed format of Quarterly Financial Results filed with the Stock Exchange under Regulation 33 of the SEBI (Listing Obligations and Disclosure Requirements) Regulations, 2015. The full format of the Quarterly Financial Results are available on the website of BSE Limited at www.bseindia.com & Company's website www.sipaper.com and can be accessed by using the QR Code provided below

Place: NANJANGUD
Date: 30-07-2026

By Order of the Board
Sd/-
MANISH M PATEL
MANAGING DIRECTOR
DIN: 00128179

# ಫುಟ್‌ಪಾತ್ ಒತ್ತುವರಿ ತೆರವಿಗೆ ಬೆಸ್ಕಾಂ ಸಾಥ್: ಕೆ.ಜೆ.ಜಾರ್ಜ್



ಟಿಸಿ ಸ್ಥಳಾಂತರ ಕಾಮಗಾರಿಯನ್ನು ಇಂಧನ ಹಾಗೂ ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ಪರಿಶೀಲಿಸಿದರು. ಈ ವೇಳೆ ಹೆಣ್ಣೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಎ.ಪುಲಕೇಶಿ, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಬೆಸ್ಕಾಂನ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು

**ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ ನಡೆಸುತ್ತಿರುವ ಒಂದು ತಿಂಗಳ ಕ್ಲೀನ್ ಅಪ್ ಬೆಂಗಳೂರು ಅಭಿಯಾನಕ್ಕೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಕೈಜೋಡಿಸಿದ್ದು, ನಗರದ ಪಾದಚಾರಿ ಮಾರ್ಗಗಳ ಮಧ್ಯದಲ್ಲಿರುವ ವಿದ್ಯುತ್ ಪರಿವರ್ತಕಗಳನ್ನು ಸ್ಥಳಾಂತರಿಸುವ ಕಾರ್ಯಕ್ಕೆ ಶನಿವಾರ ಅಧಿಕೃತ ಚಾಲನೆ ನೀಡಲಾಯಿತು ಎಂದು ಇಂಧನ ಹಾಗೂ ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

ನಗರದ ಹೆಣ್ಣೂರು ಮುಖ್ಯರಸ್ತೆ ಸಮೀಪದ ಚನ್ನಕೇಶವ ಬಡಾವಣೆಯಲ್ಲಿ ನಡೆಯುತ್ತಿರುವ ಟಿಸಿ ಸ್ಥಳಾಂತರ ಕಾಮಗಾರಿ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಡಾ. ಎನ್. ಶಿವಶಂಕರ ಅವರೊಂದಿಗೆ ಪರಿಶೀಲಿಸಿ ನಂತರ ಮಾತನಾಡಿದ ಅವರು, ಸಾರ್ವಜನಿಕರಿಗೆ ಸುರಕ್ಷಿತ ಪಾದಚಾರಿ ಮಾರ್ಗ ಕಲ್ಪಿಸಲು ಆದ್ಯತೆಯ ಮೇರೆಗೆ ಕಾರ್ಯ ಪೂರ್ಣಗೊಳಿಸುವಂತೆ ಅಧಿಕಾರಿ ಗಳಿಗೆ ಸೂಚಿಸಿದರು.

ನಗರದ ಅಭಿವೃದ್ಧಿಗೆ ವಿದ್ಯುತ್ ಮೂಲಸೌಕರ್ಯ ಅಗತ್ಯವಾದರೂ, ಪಾದಚಾರಿಗಳಿಗೆ ತೊಂದರೆಯಾಗದಂತೆ ಪಾದಚಾರಿ ಮಾರ್ಗಗಳಲ್ಲಿರುವ ವಿದ್ಯುತ್ ಪರಿವರ್ತಕಗಳನ್ನು ತ್ವರಿತವಾಗಿ ಸ್ಥಳಾಂತರಿಸಲಾಗುತ್ತಿದೆ. ಮುಂದಿನ ಒಂದು ತಿಂಗಳೊಳಗೆ ಸುರಕ್ಷಿತ ಪಾದಚಾರಿ ಮಾರ್ಗ ಹಾಗೂ ಕಸಮುಕ್ತ ವಾತಾವರಣ ನಿರ್ಮಿಸುವ ಗುರಿ ಹೊಂದಲಾಗಿದೆ ಎಂದು ಸಚಿವ ಜಾರ್ಜ್ ತಿಳಿಸಿದರು.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಡಾ. ಎನ್. ಶಿವಶಂಕರ ಮಾತನಾಡಿ, ಪಾದಚಾರಿ ಮಾರ್ಗಗಳಲ್ಲಿರುವ ಅನುಪಯುಕ್ತ ಹಾಗೂ ನಿಷ್ಕ್ರಿಯ ವಿದ್ಯುತ್ ಮೂಲಸೌಕರ್ಯ ತೆರವುಗೊಳಿಸಲಾಗುವುದು. ಹಾನಿಗೊಳಗಾದ ಕಂಬಗಳನ್ನು ಸ್ಥಳಾಂತರಿಸುವುದರ ಜತೆಗೆ, ಅಗತ್ಯವಿರುವ ಕಡೆ ವಿಶೇಷ ವಿನ್ಯಾಸದ ಪರಿವರ್ತಕ ಕೇಂದ್ರ ಹಾಗೂ ಸ್ಪನ್ ಪೋಲ್‌ಗಳನ್ನು ಅಳವಡಿಸಿ ಪಾದಚಾರಿಗಳ ಸಂಚಾರಕ್ಕೆ ಅಡ್ಡಿಯಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಅಭಿಯಾನದ ಭಾಗವಾಗಿ ಪರಿವರ್ತಕ ಕೇಂದ್ರಗಳ ಸುತ್ತಮುತ್ತ ಬೆಳೆದಿರುವ ಗಿಡಗಂಟಿಗಳನ್ನು ತೆರವುಗೊಳಿಸುವುದು, ಕಸ ಸ್ವಚ್ಛಗೊಳಿಸುವುದು ಹಾಗೂ ವಾಹನ ಸಂಚಾರಕ್ಕೆ ಅಡ್ಡಿಯಾಗಿರುವ ವಿದ್ಯುತ್ ಮೂಲಸೌಕರ್ಯಗಳನ್ನು ಗುರುತಿಸಿ ಸ್ಥಳಾಂತರಿಸುವ ಕಾರ್ಯವೂ ನಡೆಯಲಿದೆ.

-ಡಾ.ಎನ್.ಶಿವಶಂಕರ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ

# ಆನ್‌ಲೈನ್ ಜಾಹೀರಾತಿನಿಂದ ಹಣ ವಂಚನೆ

## 3.70 ಕೋಟಿ ರುಪಾಯಿ ಮೌಲ್ಯದ ಆಸ್ತಿ ಜಪ್ತಿ ಮಾಡಿದ ಇ.ಡಿ

**ಬೆಂಗಳೂರು:** ಆನ್‌ಲೈನ್ ಜಾಹೀರಾತು ವೀಕ್ಷಣೆ ಮೂಲಕ ಹಣಗಳಿಸುವ ಯೋಜನೆಗೆ ಸಂಬಂಧಿಸಿದ ವಂಚನೆ ಪ್ರಕರಣದಲ್ಲಿ ಮೆ. ಜಾ ಲೈಫ್‌ಸ್ಟೈಲ್ ಇಂಡಿಯಾ ಪ್ರೈ.ಲಿ. ಸಂಸ್ಥೆಯ ಬ್ಯಾಂಕ್ ಖಾತೆಗಳಲ್ಲಿದ್ದ 3.70 ಕೋಟಿ ರು. ಮೌಲ್ಯದ ಚರಾಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ.) ತಾತ್ಕಾಲಿಕವಾಗಿ ಜಪ್ತಿ ಮಾಡಿದೆ.

ಈ ಕುರಿತು ಇಡಿ ಪ್ರಕಣೆಯಲ್ಲಿ ಮಾಹಿತಿ ನೀಡಿದೆ. ಮೆ.ಜಾ. ಲೈಫ್‌ಸ್ಟೈಲ್ ಇಂಡಿಯಾ ಪ್ರೈ.ಲಿ. ಮತ್ತು ಇತರರು ಸಂಸ್ಥೆಯ ನಿರ್ದೇಶಕರ ವಿರುದ್ಧ ಬೆಂಗಳೂರಿನ ಮಾಗಡಿ ರಸ್ತೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎಫ್‌ಐಆರ್ ಆಧಾರದ ಮೇಲೆ ಇ.ಡಿ. ತನಿಖೆ ಆರಂಭಿಸಿತ್ತು. ಈ ಸಂಸ್ಥೆಯು ಸದಸ್ಯರನ್ನು ನೋಂದಾಯಿಸಲು ಮತ್ತು ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸಲು ಸದಸ್ಯತ್ವ ಆಧಾರಿತ ಮಾದರಿ ಅಳವಡಿಸಿಕೊಂಡಿರುವುದು ಇಡಿ ತನಿಖೆಯಿಂದ ತಿಳಿದು ಬಂದಿದೆ.ಸಂಭಾವ್ಯ ವ್ಯಕ್ತಿಗಳನ್ನು ವಾಟ್ಸ್ ಆ್ಯಪ್ ಮತ್ತು ಇತರ ಆನ್‌ಲೈನ್ ಸಂವಹನ ಮಾರ್ಗಗಳ ಮೂಲಕ ಸಂಪರ್ಕಿಸಿದೆ. ಕಂಪನಿಯ ಡಿಜಿಟಲ್ ಮಾರ್ಕೆಟಿಂಗ್ ಹಾಗೂ ಜಾಹೀರಾತು-ವೀಕ್ಷಣೆ ಕಾರ್ಯಕ್ರಮದ ಕುರಿತು ಈ ಮೂಲಕ ಮಾಹಿತಿ ನೀಡಿತ್ತು. ಆಸಕ್ತರಿಗೆ ಕಂಪನಿಯ ವೆಬ್ ಪ್ಲಾಟ್‌ಫಾರ್ಮ್‌ನಲ್ಲಿ ಉಚಿತವಾಗಿ ನೋಂದಾಯಿಸಿಕೊಳ್ಳಲು ಲಿಂಕ್ ಅನ್ನು ಒದಗಿಸಲಾಗುತ್ತಿತ್ತು. ಅಲ್ಲಿ ಅವರು ಲಾಗಿನ್ ವಿವರಗಳನ್ನು ರಚಿಸಬೇಕಿತ್ತು. ತರುವಾಯ, ಶಾಶ್ವತ ಸದಸ್ಯತ್ವ ಪಡೆಯಲು ಮತ್ತು ಕಂಪನಿಯ ಆದಾಯ ಗಳಿಕೆಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಅರ್ಹತೆ ಪಡೆಯುವ ಸಲುವಾಗಿ, ಸದಸ್ಯರು ಈ ಸಂಸ್ಥೆಯ ಬ್ಯಾಂಕ್ ಖಾತೆಗೆ 1,109 ರು. ಗಳ (ಜಿಎಸ್‌ಟಿ ಒಳಗೊಂಡಂತೆ) ಪಾವತಿಸಬೇಕಿತ್ತು. ಪ್ರಸ್ತುತ ಪ್ರಕರಣದಲ್ಲಿ, ಸಂಸ್ಥೆಯು 2020 ಡಿ.6 ರಿಂದ 2021ರ ಜೂ.4 ರ ಅವಧಿಯಲ್ಲಿ ಸಾರ್ವಜನಿಕರಿಂದ ಸುಮಾರು 4.29 ಕೋಟಿ ರು.ಸಂಗ್ರಹಿಸಿದೆ.

ಇದಲ್ಲದೆ, ಜಾಹೀರಾತುಗಳನ್ನು ವೀಕ್ಷಿಸುವ ಮೂಲಕ ಹಣಗಳಿಸುವ ಅಂತಹ ಯಾವುದೇ ಸೌಲಭ್ಯ ಕಂಪನಿಯು ಒದಗಿಸಿರಲಿಲ್ಲ. ಬದಲಾಗಿ, ಸಂಗ್ರಹಿಸಿದ ಹಣ ಕಂಪನಿಯ ನಿರ್ದೇಶಕರ ವೈಯಕ್ತಿಕ ವೆಚ್ಚಗಳು ಅಥವಾ ಲಾಭಗಳಿಗಾಗಿ ಬಳಸಿಕೊಳ್ಳಲಾಗಿದೆ. ಮುಂದಿನ ತನಿಖೆ ಪ್ರಗತಿಯಲ್ಲಿದೆ ಎಂದು ಇಡಿ ಪ್ರಕಟಣೆಯಲ್ಲಿ ತಿಳಿಸಿದೆ.

### ಆನ್‌ಲೈನ್ ಟಾಸ್ಕ್ ಹೆಸರಿನಲ್ಲಿ 5 ಲಕ್ಷ ರು. ವಂಚನೆ

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಹೊಸೂರು ಕಾನಕೇರಿಯಲ್ಲಿ ಬೇಕರಿ ನಡೆಸುತ್ತಿರುವ ಮೂಲತಃ ಹಾಸನದ ಎಸ್.ಎಸ್.ಅರ್ಪಿತಾ ಅವರು ಸೈಬರ್ ವಂಚನೆಗೊಳಗಾಗಿದ್ದರು. ಜುಲೈ 21 ರಂದು ಬೇಕರಿಯಲ್ಲಿ ವ್ಯಾಪಾರ ಮಾಡುತ್ತಿದ್ದಾಗ ಅವರ ವಾಟ್ಸ್ ಆ್ಯಪ್‌ಗೆ ಹಲೋ ಐ ಆಮ್ ಸಾನಿಯಾ ಎಂದು ಮೆಸೇಜ್ ಬಂದಿತ್ತು. ನಾವು ಹೇಳಿದ ರೆಸ್ಟೋರೆಂಟ್ಗಳಿಗೆ 5 ಸ್ಟಾರ್ ರೇಟಿಂಗ್ ಕೊಟ್ಟರೆ ಪ್ರತಿ ರೇಟಿಂಗ್‌ಗೆ 50 ರೂಪಾಯಿ ಕೊಡುತ್ತೇವೆ, ಟಾಸ್ಕ್ ಮಾಡಿದರೆ ಸಾಕು ಎಂದು ನಂಬಿಸಿದ್ದಳು. ಇದನ್ನು ನಿಜವೆಂದು ನಂಬಿದ ಅರ್ಪಿತಾ, ಆರಂಭದಲ್ಲಿ ಸಣ್ಣ ಮೊತ್ತದ ಲಾಭ ಬಂದಿದ್ದರಿಂದ 11 ಟಾಸ್ಕ್‌ಗಳನ್ನು ಪೂರ್ಣಗೊಳಿಸಿದ್ದಾರೆ. ನಂತರ ಹೆಚ್ಚಿನ ಹಣ ಹೂಡಿಕೆ ಮಾಡುವಂತೆ ಸಾನಿಯಾ ಒತ್ತಾಯಿಸಿದ್ದಳು. ಈ ವೇಳೆ ಅರ್ಪಿತಾ ಅವರ ಬ್ಯಾಂಕ್ ಖಾತೆಯಿಂದ ರೂ. 5,14,249 ಹಣವನ್ನು ದುಷ್ಕರ್ಮಿಗಳು ವರ್ಗಾವಣೆ ಮಾಡಿಕೊಂಡು ವಂಚಿಸಿದ್ದರು.

# ದುಷ್ಟಶಕ್ತಿ ನಿವಾರಣೆ ಹೆಸರಲ್ಲಿ ವಂಚಿಸಿ ಪರಾರಿ

## ಪೂಜೆ ಹೆಸರಿನಲ್ಲಿ ಆಂಧ್ರದ ಮಹಿಳೆಗೆ 2.5 ಕೋಟಿ ವಂಚನೆ

**ಬೆಂಗಳೂರು:** ದುಷ್ಟಶಕ್ತಿ ನಿವಾರಣೆ ಹಾಗೂ ಪೂಜೆಯ ನೆಪದಲ್ಲಿ ಬೆಂಗಳೂರಿನ ಚಾಮರಾಜಪೇಟೆ ನಿವಾಸಿ ಮಹಿಳೆಯೊಬ್ಬರಿಂದ ಬರೋಬ್ಬರಿ 2.5 ಕೋಟಿ ರು. ಹಣ ಪಡೆದು ವಂಚಿಸಿರುವ ಆರೋಪ ಕೇಳಿಬಂದಿದೆ. 2.5 ಕೋಟಿ ರೂ. ನೀಡಿದರೆ 10 ಕೋಟಿ ರೂ. ಕೊಡಿಸುವುದಾಗಿ ನಂಬಿಸಿ ಹಣ ಪಡೆದ ಆರೋಪಿಗಳ ವಿರುದ್ಧ ಸಿಸಿಬಿಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಆರಂಭವಾಗಿದೆ.

ದೂರುದಾರ ಮಹಿಳೆ ಕುಮುದಾ ಮೂಲತಃ ಆಂಧ್ರಪ್ರದೇಶದವರಾಗಿದ್ದು, ಚಾಮರಾಜಪೇಟೆಯಲ್ಲಿ ವಾಸವಾಗಿದ್ದಾರೆ. ಅವರ ಪುತ್ರ ಬೈಕ್ ಅಪಘಾತದಲ್ಲಿ ಮೃತಪಟ್ಟಿದ್ದ. ಕುಮುದಾ ಅವರ ಮನೆಗೆ ದುಷ್ಟಶಕ್ತಿಗಳು ಪ್ರವೇಶಿಸಿದ್ದರಿಂದಲೇ ಮಗನಿಗೆ ಅನಾಹುತವಾಗಿದೆ ಆ ಘಟನೆ ಬಳಿಕ ಎಂದು ಆರೋಪಿಗಳು ನಂಬಿಸಿದರೆಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಮನೆಯ ಮೇಲೆ ಸಾಲ ಪಡೆಯುವ ವಿಚಾರದಲ್ಲಿ ಪರಿಚಯವಾಗಿದ್ದ ಮಧ್ಯವರ್ತಿಗಳ ಮೂಲಕ ಕುಮುದಾ ಅವರಿಗೆ ಅಪ್ಸರ್ ಪಾಷಾ ಎಂಬಾತನನ್ನು ಬಾಬಾ ಎಂದು ಪರಿಚಯಿಸಲಾಗಿತ್ತು. ಬಳಿಕ ಮನೆಯಲ್ಲಿ ವಿಶೇಷ ಪೂಜೆ ನಡೆಸುವ ನೆಪದಲ್ಲಿ ಆರಂಭದಲ್ಲಿ 8 ಲಕ್ಷ ರೂ. ಪಡೆದಿದ್ದರು ಎನ್ನಲಾಗಿದೆ.

### 10 ಕೋಟಿ ರು.ನೀಡುವುದಾಗಿ ವಂಚನೆ

ನಂತರ ಆರೋಪಿಗಳು ಮತ್ತಷ್ಟು ಹಣ ನೀಡುವಂತೆ ಕುಮುದಾ ಅವರನ್ನು ನಂಬಿಸಿದ್ದಾರೆ ಎನ್ನಲಾಗಿದೆ. ರಿಸರ್ವ್ ಬ್ಯಾಂಕ್‌ನಿಂದ 500 ಕೋಟಿ ರು. ಬರಲಿದೆ. ಆ ಹಣ ಪಡೆಯಲು ತಕ್ಷಣ ಹಣದ ಅಗತ್ಯವಿದೆ ಎಂದು ಹೇಳಿ, 2.5 ಕೋಟಿ ರು. ಸಾಲವಾಗಿ ನೀಡಿದರೆ ಬಳಿಕ 10 ಕೋಟಿ ರು. ಹಿಂದಿರುಗಿಸುವುದಾಗಿ ಭರವಸೆ ನೀಡಿದ್ದರು ಎನ್ನಲಾಗಿದೆ. ಆರೋಪಿಗಳ ಮಾತನ್ನು ನಂಬಿದ ಕುಮುದಾ, ಚಾಮರಾಜಪೇಟೆಯಲ್ಲಿದ್ದ ತಮ್ಮ ಮನೆಯನ್ನು 8.5 ಕೋಟಿ ರು. ಗೆ ಮಾರಾಟ ಮಾಡಿದ್ದರು. ಮನೆ ಮಾರಾಟದಿಂದ ಬಂದ ಹಣದಲ್ಲಿ 2.5 ಕೋಟಿ ರು. ಗಳನ್ನು ಆರೋಪಿಗಳಿಗೆ ನೀಡಿದ್ದು, ಬಳಿಕ ಹಣ ವಾಪಸ್ ಕೇಳಿದಾಗ ವಂಚನೆ ಬೆಳಕಿಗೆ ಬಂದಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಹಣವನ್ನು ವಾಪಸ್ ನೀಡುವಂತೆ ಕುಮುದಾ ಕೇಳಿದಾಗ ಆರೋಪಿಗಳು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ ಎಂಬ ಆರೋಪವೂ ಕೇಳಿಬಂದಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಬಾ ಎಂದು ಹೇಳಲಾಗಿರುವ ಅಪ್ಸರ್ ಪಾಷಾ ಹಾಗೂ ಮಧ್ಯವರ್ತಿಗಳಾದ ಶಂಕರ್ ಮತ್ತು ಭರತ್ ವಿರುದ್ಧ ಸಿಸಿಬಿಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪ್ರಕರಣದ ವಿವಿಧ ಆಯಾಮಗಳ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

### ಕೆಪಿಎಸ್‌ಸಿ ಕಾರ್ಯದರ್ಶಿಗೆ ನೋಟಿಸ್

**ಬೆಂಗಳೂರು:** ನೇಮಕಾತಿ ಹಗರಣ ಸಂಬಂಧ ಕೆಪಿಎಸ್‌ಸಿ ಕಾರ್ಯದರ್ಶಿ ಜ್ಯೋತಿಗೆ ಸಿಐಡಿ ನೋಟಿಸ್ ಜಾರಿ ಮಾಡಿದೆ.ಪಶು ವೈದ್ಯಾಧಿಕಾರಿ ನೇಮಕಾತಿಯ ಅಧಿಸೂಚನೆ, ಪ್ರಶ್ನೆ ಪತ್ರಿಕೆ, ಒಎಂಆರ್ ಶೀಟ್, ವೈವಾ ಡೀಟೈಲ್ಸ್ ಹೀಗೆ ಎಲ್ಲಾ ದಾಖಲಾತಿಗಳನ್ನ ನೀಡಿ 80 ಲಕ್ಷ ನೀಡಿ ಪಶುವೈದ್ಯಾಧಿಕಾರಿ ಪೋಸ್ಟ್‌ಗಳನ್ನು ಬ್ರೋಕರ್‌ಗಳಿಂದ ಡೀಲ್ ಮಾಡಿಸಿದ ಆಡಿಯೋ ವೈರಲ್ ಬೆನ್ನಲ್ಲೇ ಸರಕಾರ ತನಿಖೆಯನ್ನ ಸಿಐಡಿಗೆ ವಹಿಸಿತ್ತು.

**ಶ್ಯಾಡೋಫ್ಯಾಕ್ಸ್ ಟೆಕ್ನಾಲಜೀಸ್ ಲಿಮಿಟೆಡ್**
SHADOWFAX Think ahead!
(ಈ ಹಿಂದೆ ಶ್ಯಾಡೋಫ್ಯಾಕ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸಿಐಎನ್: U72300KA2015PLC150324
ನೋಂದಾಯಿತ ಕಚೇರಿ: 3ನೇ ಮಹಡಿ, ಶಿಲ್ಪಿತ ಟೆಕ್ ಪಾರ್ಕ್, ಸರ್ವೇ ನಂ. 55/3 & 55/4, ಹೊರವರ್ತುಲ ರಸ್ತೆ, ದೇವರಬೀಸನಹಳ್ಳಿ ವಿಲೇಜ್, ಬೆಳ್ಳಂದೂರು, ವರ್ತೂರು ಹೋಬಳಿ, ಬೆಳ್ಳಂದೂರು, ಬೆಂಗಳೂರು, ಕರ್ನಾಟಕ, ಭಾರತ – 560103.
ದೂ.: +91 80 64525653; ಇಮೇಲ್: investors@shadowfax.in ವೆಬ್‌ಸೈಟ್: www.shadowfax.in

**ಜೂನ್ 30, 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಅಪರಿಶೋಧಿತ ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಸಾರಾಂಶ**
ಪ್ರತಿ ಷೇರಿನ ದತ್ತಾಂಶ ಹೊರತುಪಡಿಸಿ ಮೊತ್ತ ರೂ. ಕೋಟಿಗಳಲ್ಲಿ

| ವಿವರಗಳು | ಕೊನೆಗೊಂಡ ತ್ರೈಮಾಸಿಕ | | | ವರ್ಷಾಂತ್ಯ |
|---|---|---|---|---|
| | 30 ಜೂನ್, 2026 (ಅಪರಿಶೋಧಿತ) | 31 ಮಾರ್ಚ್, 2026 (ಪರಿಶೋಧಿತ) | 30 ಜೂನ್, 2025 (ಅಪರಿಶೋಧಿತ) | 31 ಮಾರ್ಚ್, 2026 (ಪರಿಶೋಧಿತ) |
| ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ | 1,379.18 | 1,252.60 | 831.72 | 4,238.59 |
| ತೆರಿಗೆಯ ಮೊದಲು ಅವಧಿಯ ನಿವ್ವಳ ಲಾಭ (ಅಸಾಧಾರಣ ಐಟಂಗಳ ಮೊದಲು) | 65.40 | 54.86 | 8.02 | 110.74 |
| ತೆರಿಗೆಯ ಮೊದಲು ಅವಧಿಯ ನಿವ್ವಳ ಲಾಭ (ಅಸಾಧಾರಣ ಐಟಂಗಳ ನಂತರ) | 65.40 | 54.86 | 8.02 | 110.74 |
| ತೆರಿಗೆಯ ನಂತರ ಅವಧಿಯ ನಿವ್ವಳ ಲಾಭ | 65.40 | 55.83 | 8.02 | 111.71 |
| ಅವಧಿಯ ಒಟ್ಟು ಸಮಗ್ರ ಆದಾಯ | 65.43 | 55.76 | 8.02 | 111.33 |
| ಪಾವತಿಸಿದ ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ಪ್ರತಿಯೊಂದಕ್ಕೆ ರೂ. 10/–) | 585.08 | 582.27 | 151.79 | 582.27 |
| ಇತರೆ ಈಕ್ವಿಟಿ | - | - | - | 1,162.57 |
| ಪ್ರತಿ ಷೇರಿನ ಗಳಿಕೆ (ಪ್ರತಿಯೊಂದಕ್ಕೆ ರೂ. 10/–) (ವರ್ಷಾಂತ್ಯ ಮಾರ್ಚ್ 31, 2026, ಅನ್ನು ಹೊರತುಪಡಿಸಿ ವಾರ್ಷಿಕಗೊಳಿಸಿಲ್ಲ) | | | | |
| (ಎ) ಮೂಲ | 1.11 | 0.95 | 0.16 | 2.22 |
| (ಬಿ) ವಿಭಜಿತ | 1.10 | 0.94 | 0.15 | 2.18 |

ಟಿಪ್ಪಣಿಗಳು:

1. (ಎ) ಮೇಲಿನ ವಿವರಗಳು SEBI (LODR) ನಿಯಮಗಳು, 2015ರ 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಸಲ್ಲಿಸಲಾಗಿರುವ ತ್ರೈಮಾಸಿಕ ಆರ್ಥಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಾಂಶವಾಗಿದೆ. ತ್ರೈಮಾಸಿಕ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್ **www.nseindia.com** ಮತ್ತು **www.bseindia.com** ಹಾಗೂ ಕಂಪನಿಯ ವೆಬ್‌ಸೈಟ್ **www.shadowfax.in** ನಲ್ಲಿ ಲಭ್ಯವಿದೆ.
   (ಬಿ) 30 ಜೂನ್, 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಅಪರಿಶೋಧಿತ ಕ್ರೋಢೀಕೃತ ಫಲಿತಾಂಶಗಳನ್ನು 31 ಜುಲೈ, 2026ರಂದು ನಡೆದ ಸಭೆಯಲ್ಲಿ ಲೆಕ್ಕಪರಿಶೋಧನಾ ಸಮಿತಿಯು ಪರಿಶೀಲಿಸಿದೆ ಹಾಗೂ ಕಂಪನಿಯ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅನುಮೋದಿಸಿದೆ. ಮೇಲಿನ ಆರ್ಥಿಕ ಫಲಿತಾಂಶಗಳನ್ನು ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮಾಡಿದ್ದಾರೆ, ಅದರ ಬಗ್ಗೆ ಅವರು ಮಾರ್ಪಡಿಸದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.
2. ಜೂನ್ 30, 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕದ ಪ್ರತ್ಯೇಕ ಆರ್ಥಿಕ ಫಲಿತಾಂಶಗಳ ಪ್ರಮುಖ ಅಂಕಿಅಂಶಗಳು: ಮೊತ್ತ ರೂ. ಕೋಟಿಗಳಲ್ಲಿ

| ವಿವರಗಳು | ಕೊನೆಗೊಂಡ ತ್ರೈಮಾಸಿಕ | | | ವರ್ಷಾಂತ್ಯ |
|---|---|---|---|---|
| | 30 ಜೂನ್, 2026 (ಅಪರಿಶೋಧಿತ) | 31 ಮಾರ್ಚ್, 2026 (ಪರಿಶೋಧಿತ) | 30 ಜೂನ್, 2025 (ಅಪರಿಶೋಧಿತ) | 31 ಮಾರ್ಚ್, 2026 (ಪರಿಶೋಧಿತ) |
| ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ | 1,344.88 | 1,221.73 | 804.16 | 4,116.96 |
| ತೆರಿಗೆಯ ಮೊದಲು ಅವಧಿಯ ನಿವ್ವಳ ಲಾಭ (ಅಸಾಧಾರಣ ಐಟಂಗಳ ಮೊದಲು) | 66.20 | 55.27 | 9.14 | 115.18 |
| ತೆರಿಗೆಯ ಮೊದಲು ಅವಧಿಯ ನಿವ್ವಳ ಲಾಭ (ಅಸಾಧಾರಣ ಐಟಂಗಳ ನಂತರ) | 66.20 | 55.27 | 9.14 | 115.18 |
| ತೆರಿಗೆಯ ನಂತರ ಅವಧಿಯ ನಿವ್ವಳ ಲಾಭ | 66.20 | 55.27 | 9.14 | 115.18 |
| ಅವಧಿಯ ಒಟ್ಟು ಸಮಗ್ರ ಆದಾಯ | 66.23 | 55.71 | 9.14 | 115.30 |

ಶ್ಯಾಡೋಫ್ಯಾಕ್ಸ್ ಟೆಕ್ನಾಲಜೀಸ್ ಲಿಮಿಟೆಡ್‌ನ ಮೇಲೆ ಸೂಚಿಸಿದ ಅವಧಿಯ ಪ್ರತ್ಯೇಕ ಫಲಿತಾಂಶವು ಕಂಪನಿಯ ವೆಬ್‌ಸೈಟ್ www.shadowfax.in ನ ಇನ್‌ವೆಸ್ಟರ್ಸ್ ವಿಭಾಗದಲ್ಲಿ ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.nseindia.com ಮತ್ತು www.bseindia.com ನಲ್ಲಿ ಸಹಾ ಲಭ್ಯವಿರುತ್ತದೆ.

ಶ್ಯಾಡೋಫ್ಯಾಕ್ಸ್ ಟೆಕ್ನಾಲಜೀಸ್ ಲಿಮಿಟೆಡ್ ಮಂಡಳಿಯ ನಿರ್ದೇಶಕರುಗಳ ಪರವಾಗಿ
(ಈ ಹಿಂದೆ ಶ್ಯಾಡೋಫ್ಯಾಕ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸಹಿ/–
ಅಭಿಷೇಕ್ ಬನ್ಸಾಲ್
ಚೇರ್‌ಮನ್, ಮ್ಯಾನೇಜಿಂಗ್ ಡೈರೆಕ್ಟರ್ & ಸಿಇಒ
DIN: 07155421

ಸ್ಥಳ : ಬೆಂಗಳೂರು
ದಿನಾಂಕ : ಜುಲೈ 31, 2026

# ಐದು ಪಾಲಿಕೆಗಳಲ್ಲಿ ತ್ಯಾಜ್ಯದಿಂದ ಸ್ವಾತಂತ್ರ್ಯ ಅಭಿಯಾನ

## ಆ.15ರೊಳಗೆ ಖಾಲಿ ನಿವೇಶನಗಳಲ್ಲಿನ ತ್ಯಾಜ್ಯ ತೆರವುಗೊಳಿಸದಿದ್ದರೆ 1 ಲಕ್ಷದವರೆಗೆ ದಂಡ ಸಾಧ್ಯತೆ





**ಬೆಂಗಳೂರು:** ಸ್ವಚ್ಛ, ಸುಂದರ ಹಾಗೂ ತ್ಯಾಜ್ಯಮುಕ್ತ ಬೆಂಗಳೂರಿನ ನಿರ್ಮಾಣದ ಗುರಿಯೊಂದಿಗೆ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರ ನಿರ್ದೇಶನದಂತೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಶನಿವಾರ ತ್ಯಾಜ್ಯದಿಂದ ಸ್ವಾತಂತ್ರ್ಯ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಸಿಎಂ ಡಿ.ಕೆ.ಶಿವಕುಮಾರ್ ಹಾಗೂ ನಗರಾಭಿವೃದ್ಧಿ ಸಚಿವರು ಅಭಿಯಾನಕ್ಕೆ ಚಾಲನೆ ನೀಡಿದ ಹಿನ್ನೆಲೆಯಲ್ಲಿ ಪೂರ್ವ, ಕೇಂದ್ರ, ದಕ್ಷಿಣ, ಪಶ್ಚಿಮ ಸೇರಿದಂತೆ ವಿವಿಧ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಆಯುಕ್ತರು, ಶಾಸಕರು ಹಾಗೂ ಅಧಿಕಾರಿಗಳು ಸ್ಥಳೀಯ ಮಟ್ಟದಲ್ಲಿ ಕಾರ್ಯಾಚರಣೆಗೆ ಚಾಲನೆ ನೀಡಿ ಸಾರ್ವಜನಿಕ ಸ್ಥಳಗಳಲ್ಲಿ ಸಂಗ್ರಹವಾಗಿದ್ದ ಕಟ್ಟಡ ನಿರ್ಮಾಣ ತ್ಯಾಜ್ಯ, ಇನರ್ಟ್ ತ್ಯಾಜ್ಯ ಹಾಗೂ ಇತರೆ ಅವಶೇಷಗಳನ್ನು ತೆರವುಗೊಳಿಸಿದರು.

ಕೇಂದ್ರ ನಗರ ಪಾಲಿಕೆ ಆಯುಕ್ತ ಜಗದೀಶ್ ಜಿ ಅವರು ಅಭಿಯಾನದ ಜತೆಗೆ ಗುಬ್ಬಿ ವೀರಣ್ಣ ರಂಗಮಂದಿರ, ಓಕಳೀಪುರ ಅಷ್ಟಪಥ ಕಾರಿಡಾರ್, ಮಲ್ಲೇಶ್ವರ ಪಾದಚಾರಿ ಮಾರ್ಗ, ಸುರಂಗ ಮಾರ್ಗ ಹಾಗೂ ಬಸ್ ನಿಲ್ದಾಣಗಳ ಸುತ್ತಮುತ್ತಲಿನ ಸ್ವಚ್ಛತಾ ಕಾಮಗಾರಿಗಳನ್ನು ಪರಿಶೀಲಿಸಿ ಅಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಿದರು. ಅನಧಿಕೃತ ಓಎಫ್‌ಸಿ ಕೇಬಲ್‌ಗಳನ್ನು ತೆರವುಗೊಳಿಸುವಂತೆ ನಿರ್ದೇಶಿಸಿದರು.

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ತೆರವುಗೊಳಿಸಿದ ಕಟ್ಟಡ ತ್ಯಾಜ್ಯವನ್ನು ಯರಪ್ಪನಹಳ್ಳಿಯಲ್ಲಿನ ಐದು ಎಕರೆ ವಿಲೇವಾರಿ ಕೇಂದ್ರಕ್ಕೆ ಸಾಗಿಸಲಾಗುತ್ತಿದೆ. ತ್ಯಾಜ್ಯ ಸಾಗಣೆ ಹಾಗೂ ವಿಲೇವಾರಿಯನ್ನು ಕ್ಲಿಯರ್‌ಇಟ್ ತಂತ್ರಾಂಶದ ಮೂಲಕ ಮೇಲ್ವಿಚಾರಣೆ ಮಾಡಲಾಗುತ್ತಿದೆ. ಎಲ್ಲಾ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿರುವ ಖಾಲಿ ನಿವೇಶನಗಳ ಮಾಲೀಕರು ಆಗಸ್ಟ್ 15ರೊಳಗೆ ತಮ್ಮ ನಿವೇಶನಗಳಲ್ಲಿರುವ ಕಟ್ಟಡ ತ್ಯಾಜ್ಯ, ಡೆಬ್ರಿಸ್ ಹಾಗೂ ಕಸವನ್ನು ಕಡ್ಡಾಯವಾಗಿ ತೆರವುಗೊಳಿಸಿ ನಿಯಮಾನುಸಾರ ವಿಲೇವಾರಿ ಮಾಡಬೇಕು ಎಂದು ಅಧಿಕಾರಿಗಳು ಸೂಚಿಸಿದ್ದಾರೆ. ಸ್ವಚ್ಛತೆ ನಗರ ಪಾಲಿಕೆಯೊಂದರ ಜವಾಬ್ದಾರಿಯಲ್ಲ, ಸಾರ್ವಜನಿಕರು, ನಿವಾಸಿಗಳ ಸಂಘಗಳು, ಕಟ್ಟಡ ನಿರ್ಮಾಣ ಸಂಸ್ಥೆಗಳು, ವ್ಯಾಪಾರಿಗಳು ಹಾಗೂ ಯುವಜನರು ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸಿ ತ್ಯಾಜ್ಯದಿಂದ ಸ್ವಾತಂತ್ರ್ಯ ಅಭಿಯಾನವನ್ನು ಜನಾಂದೋಲನವಾಗಿಸಬೇಕು ಎಂದು ಪಾಲಿಕೆಗಳ ಆಯುಕ್ತರು ಮನವಿ ಮಾಡಿದ್ದಾರೆ.

### ದಂಡ ವಸೂಲಿ

ಗಡುವಿನ ಬಳಿಕ ಪಾಲಿಕೆ ಸ್ವತಃ ತ್ಯಾಜ್ಯ ತೆರವುಗೊಳಿಸಿ ಅದರ ವೆಚ್ಚವನ್ನು ಆಸ್ತಿ ಮಾಲೀಕರಿಂದ ವಸೂಲಿ ಮಾಡಲಿದ್ದು, ಮೊದಲ ಉಲ್ಲಂಘನೆಗೆ 25 ಸಾವಿರ ರು., ನಂತರದ ಉಲ್ಲಂಘನೆಗಳಿಗೆ 50 ಸಾವಿರದಿಂದ 1 ಲಕ್ಷ ರು.ದವರೆಗೆ ದಂಡ ವಿಧಿಸಲಾಗುವುದು ಎಂದು ಅಧಿಕಾರಿಗಳು ಎಚ್ಚರಿಸಲಾಗಿದೆ.

### ಪಾಲಿಕೆವಾರು ತಾಜ್ಯ ತೆರವು ಅಭಿಯಾನ

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಕೆ.ಆರ್.ಪುರ ಐಟಿಐ ಗೇಟ್ ಹಾಗೂ ಮಹದೇವಪುರದ ಚಿನ್ನಪ್ಪನಹಳ್ಳಿ ಪ್ರದೇಶಗಳಲ್ಲಿ ಅಭಿಯಾನ ಆರಂಭವಾಗಿದ್ದು, ಮೊದಲ ದಿನವೇ ಸುಮಾರು 250 ಮೆಟ್ರಿಕ್ ಟನ್ ಕಟ್ಟಡ ನಿರ್ಮಾಣ ತ್ಯಾಜ್ಯವನ್ನು ತೆರವುಗೊಳಿಸಲಾಯಿತು. ಪಾಲಿಕೆ ವ್ಯಾಪ್ತಿಯ ಸಮೀಕ್ಷೆಯಲ್ಲಿ 236 ಸ್ಥಳಗಳಲ್ಲಿ ಸುಮಾರು 12 ಸಾವಿರ ಮೆಟ್ರಿಕ್ ಟನ್ ಕಟ್ಟಡ ನಿರ್ಮಾಣ ಹಾಗೂ ಇನರ್ಟ್ ತ್ಯಾಜ್ಯ ಗುರುತಿಸಲಾಗಿದ್ದು, ಹಂತ ಹಂತವಾಗಿ ತೆರವುಗೊಳಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಜಯನಗರ, ಪದ್ಮನಾಭನಗರ, ಬೆಂಗಳೂರು ದಕ್ಷಿಣ ಹಾಗೂ ಬೊಮ್ಮನಹಳ್ಳಿ ಕ್ಷೇತ್ರಗಳಲ್ಲಿ ಕಾರ್ಯಾಚರಣೆ ನಡೆಸಿ ಮೊದಲ ದಿನವೇ 70 ಟನ್ ಕಟ್ಟಡ ತ್ಯಾಜ್ಯವನ್ನು ತೆರವುಗೊಳಿಸಲಾಯಿತು. ಪಶ್ಚಿಮ ನಗರ ಪಾಲಿಕೆಯಲ್ಲಿ ಗೋವಿಂದರಾಜನಗರ ವಿಭಾಗ ಹಾಗೂ ಕೇಂದ್ರ ನಗರ ಪಾಲಿಕೆಯಲ್ಲಿ ಚಿಕ್ಕಪೇಟೆ ವಿಭಾಗದ ಮಾವಳ್ಳಿ ಎಚ್. ಸಿದ್ದಯ್ಯ ರಸ್ತೆಯಲ್ಲಿ ಅಭಿಯಾನಕ್ಕೆ ಚಾಲನೆ ನೀಡಲಾಯಿತು.